# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

# ಬೆಂಗಳೂರು ನಗರ.

## ಸಿಸಿ. 2963/2021

| | |
|---|---|
| ಸಾಕ್ಷಿದಾರರ ಹೆಸರು | ಯಶಸ್ವಿನಿ |
| ಗಂಡನ ಹೆಸರು | ವಿನಯದೇವ್ |
| ವಯಸ್ಸು | 38 ವರ್ಷ |
| ಉದ್ಯೋಗ | ಸಾಫ್ಟವೇರ್ ಇಂಜಿನೀಯರ್ |
| ವಾಸ | ನಾಗರಭಾವಿ, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 28/06/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಇದೇ ನ್ಯಾಯಾಲಯದ ಆವರಣದಲ್ಲಿ ಇರುವ ಕರ್ನಾಟಕ ಬ್ಯಾಂಕ್ ನಲ್ಲಿ ನಾನು ಖಾತೆಯನ್ನು ಹೊಂದಿರುತ್ತೇನೆ. ಅದರ ಸಂಖ್ಯೆ.1257000300011601 ಆಗಿರುತ್ತದೆ. ಚಾಸ-3 ಮತ್ತು 4 ರವರು ನನ್ನ ಸಹೋದರಿ ಮತ್ತು ಸಹೋದರ. ನನ್ನ ಖಾತೆಯಲ್ಲಿ ರೂ.53,50,000/- ಹಣ ಇತ್ತು. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ದಿನಾಂಕ 30/04/2019 ರ ಪತ್ರದ ಮೇಲಿನ ಸಹಿಯನ್ನು ಸಾಕ್ಷಿದಾರರು ಗುರುತಿಸಿದ್ದರಿಂದ, ಸದರಿ ಪತ್ರವನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನನ್ನ ಖಾತೆಯಿಂದ ಪೂರ್ತಿ ಹಣ ಬೇರೆಯವರ ಖಾತೆಗೆ ಜಮಾ ಆಗಿರುತ್ತದೆ. ಯಾವ ದಿನಾಂಕದಂದು ನನ್ನ ಖಾತೆಯಿಂದ ಹಣ ಕಡಿತವಾಗಿ ಮತ್ತು ಯಾವ ದಿನಾಂಕದಂದು ನನ್ನ ಖಾತೆಗೆ ಹಣ ವಾಪಾಸು ಬಂದಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನಂತರ ನನ್ನ ಹಣ ರಾಜು ಥಾಮಸ್ ರವರ ಖಾತೆಗೆ ಹೋಗಿತ್ತು ಎಂದು ತಿಳಿದುಬಂದಿರುತ್ತದೆ. ನನ್ನ ಖಾತೆಯಲ್ಲಿದ್ದ ಹಣ ಯಾರೆಲ್ಲರ ಖಾತೆಗೆ ಎಷ್ಟು ಎಷ್ಟು ಹಣ ಹೋಗಿತ್ತು ಎಂದು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ನಾನು ಪೊಲೀಸರ ಮುಂದೆ

ಹೇಳಿಕೆ ಕೊಡುವ ಪೂರ್ವದಲ್ಲಿ ನನ್ನ ಬ್ಯಾಂಕ್ ಖಾತೆಯ ಸ್ಟೇಟಮೆಂಟ್ ನ್ನು ಪರಿಶೀಲಿಸಿರುವುದಿಲ್ಲ. ನನ್ನ ಖಾತೆಯಿಂದ ಕೆಲವರ ಖಾತೆಗೆ ಹಣ ವರ್ಗಾವಣೆಯಾಗಿತ್ತು ಎಂದು ತಿಳಿದುಕೊಂಡಿರುತ್ತೇನೆ, ಆದರೆ ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

2. ದಿನಾಂಕ 20/11/2019 ರಂದು ನಾನು ತನಿಖಾಧಿಕಾಯವರ ಮುಂದೆ ಹೇಳಿಕೆ ಕೊಟ್ಟಿದ್ದು, ದಿನಾಂಕ 16/05/2017 ರಂದು ನನ್ನ ಖಾತೆಯಿಂದ ಮಂಜುನಾಥಎಮ್,ಕೆ. ಅವರ ಖಾತೆಗೆ ರೂ,3,00,000/-, ನಾಗೇಶ ರವರ ಖಾತೆಗೆ ರೂ.2,00,000/-, ದಿನಾಂಕ 12/06/2017 ರಂದು ಮಂಜುನಾಥ ರವರ ಖಾತೆಗೆ ರೂ.20,00,00/-, ಕೃಷ್ಣ ಕುಮಾರ ಅವರ ಖಾತೆಗೆ ರೂ.5,00,000/-, ದಿನಾಂಕ 28/06/2017 ರಂದು ಕೃಷ್ಣಕುಮಾರ ಅವರ ಖಾತೆಗೆ ರೂ.5,00,000/-, 29/06/2017 ರಂದು ಕೃಷ್ಣಕುಮಾರ ಅವರ ಖಾತೆಗೆ ರೂ.3,00,000/-, 06/07/2017 ರಂದು ಯಶೋಧಾ ಮತ್ತು ಕೋಡಿಗೌತ ಅವರ ಜಂಟಿ ಖಾತೆಗೆ ರೂ.5,00,000/-, 10/07/2017 ರಂದು ಕೃಷ್ಣಕುಮಾರ ಅವರ ಖಾತೆಗೆ ರೂ.5,00,000/- ಹಣ ಜಮಾ ಆಗಿತ್ತು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

3. ದಿನಾಂಕ 04/12/2017 ರಂದು ಮಂಜುನಾಥ ರವರ ಉಳಿತಾಯ ಖಾತೆಯಿಂದ ರೂ.5,00,000/-, ಯಶೋಧಾ ಮತುತ ಕೋಡಿಗೌತ ರವರ ಜಂಟಿ ಖಾತೆಯಿಂದ ರೂ.5,00,000/-, ಕೃಷ್ಣಕುಮಾರ ಅವರ ಚಾಲ್ತಿ ಖಾತೆಯಿಂದ ರೂ.5,00,000/-, ಕೋಕೊನಟ್ ಗ್ರೋ ರವರ ಚಾಲ್ತಿ ಖಾತೆಯಿಂದ ರೂ. 5,50,000/-, ಮಂಜುನಾಥ ರವರ ಚಾಲ್ತಿ ಖಾತೆಯಿಂದ ರೂ.20,00,000/-,

ಕೃಷ್ಣಕುಮಾರ ರವರ ಚಾಲ್ತಿ ಖಾತೆಯಿಂದ ರೂ. 3,00,000/-, ಕೃಷ್ಣ ಕುಮಾರ ರವರ ಮತ್ತೆರಡು ಚಾಲ್ತಿ ಖಾತೆ ಗಳಿಂದ ತಲಾ ರೂ, 5,00,000/- ಹಣ ನನ್ನ ಖಾತೆಗೆ ವರ್ಗಾವಣೆಯಾಗಿದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನನ್ನ ಖಾತೆಯಿಂದ ಮಂಜುನಾಥ, ಕೋಕೋನಟ್ ಗ್ರೋ, ಯೆಶೋಧಾ ಮತ್ತು ಕೋಡಿಗೌಡ ರವರ ಖಾತೆಗಳಿಗೆ ಹಣ ವರ್ಗಾಯಿಸುವಂತೆ ನಾನು ಯಾವುದಲೇ ಚೆಕ್ಕನ್ನಾಗಲೀ ಅಥವಾ ಯಾವುದೇ ನಿರ್ದೇಶನವನ್ನಾಗಲೀ ನೀಡಿರಲಿಲ್ಲ. ಚೆಕ್ ನಂ.904799, 904798, 904797, 904796, 904795, 904794, 904793, 904792 ಚೆಕ್ ಗಳನ್ನು ನೀವು ಮಂಜುನಾಥ, ಕೋಕೋನಟ್ ಗ್ರೋ, ಯೆಶೋಧಾ ಮತ್ತು ಕೋಡಿಗೌಡ ರವರಿಗೆ ನೀಡಿದ್ದರೆಂದರೆ ಇಲ್ಲ ಎಂದು ಹೇಳುತ್ತಾರೆ.

4. ಸಾಕ್ಷಿದಾರರಿಗೆ ಒಂದು ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ತೋರಿಸಿದ್ದು, ಸಾಕ್ಷಿದಾರರು ಅದನ್ನು ಪರಿಶೀಲಿಸಿ, ಸಾಕ್ಷಿ ಅದು ನನ್ನ ಬಾಂಕ್ ಖಾತೆಯ ಸ್ಟೇಟಮೆಂಟಿ ಎಂದು ಒಪ್ಪಿದ್ದರಿಂದ ನಿಪಿ-6 ಎಂದು ಗುರುತಿಸಲಾಯಿತು. ನಿಪಿ-5 ಮತ್ತು ನಿಪಿ-5(ಎ) ರಲ್ಲಿರುವ ಎಲ್ಲ ವರ್ಗಾವಣೆಗಳು ನಿಪಿ-6 ರಲ್ಲಿ ನಮುದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ವರ್ಗಾವಣೆಗಳ ಬಗ್ಗೆ ನನಗೆ ಮಾಹಿತಿ ಇರಲಿಲ್ಲ, ಪೊಲೀಸ್ ಠಾಣೆಗೆ ಹೋದಾಗ ನನಗೆ ಗೊತ್ತಾಯಿತು ಎಂದು ಹೇಳುತ್ತಾರೆ. ಆರೋಪಿ ದೊರೆಸ್ವಾಮಿ ಸದರಿ ಸಮಯದಲ್ಲಿ ಬಾಂಕ್ ಮ್ಯಾನೇಜರ್ ಆಗಿದ್ದರು. ಆರೋಪಿಗೆ ಸಹಾಯ ಮಾಡಲು ನನ್ನ ಖಾತೆಯಿಂದ ಹಣ ವರ್ಗಾವಣೆಯಾಗಿದ್ದರು ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಎಸ್.ಎಸ್. ವಕೀಲರಿಂದಃ**

5. ನನ್ನ ತಂದೆ ನನ್ನ ಸಹೋದರಿ ಹಾಗೂ ನನ್ನ ಸಹೋದರ ಹಾಗೂ ನನ್ನ ಹೆಸರಿನಲ್ಲಿ ಖಾತೆಗಳನ್ನು ತೆರೆದಿದ್ದರು ಎಂದರೆ ಸರಿ. ಬ್ಯಾಂಕ್ ಖಾತೆಗಳನ್ನು ತೆರೆಯುವ ಸಮಯದಲ್ಲಿ ನಾನಾಗಲೀ , ನನ್ನ ಸಹೋದರ ಹಾಗೂ ನನ್ನ ಸಹೋದರಿಯಾಗಲೀ

ಬಂದಿರಲಿಲ್ಲ ಎಂದರೆ ಸರಿ. ನಮ್ಮಗಳ ಸಹಿಗಳನ್ನು ಪಡೆದುಕೊಂಡು ನಮ್ಮ ಖಾತೆಗಳನ್ನು ಖಾತೆ ತೆರೆದಿರುತ್ತಾರೆ ಎಂದರೆ ಸರಿ. ನನ್ನ ತಂದೆ ನಮ್ಮ ಖಾತೆಗಳನ್ನು ನಿರ್ವಹಿಸುತ್ತಿದ್ದುದರಿಂದ ನಾವು ಬ್ಯಾಂಕ್ ಗೆ ಬರುತ್ತಿರಲಿಲ್ಲ ಎಂದರೆ ಸರಿ. ನಮ್ಮ 3 ಜನರ ಖಾತೆಗೆ ನನ್ನ ತಂದೆ ತಮ್ಮ ಮೊಬೈಲ್ ನಂಬರ ನೀಡಿದ್ದರು ಎಂದರೆ ಸರಿ. ಸದರಿ ಖಾತೆಗಳಿಗಂದ ಹಣ ವರ್ಗಾವಣೆಯಾದಾಗ ನಮ್ಮ ತಂದೆಯವರ ಮೊಬೈಲ್ ಗೆ ಮಾಹಿತಿ ಬರುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಈ ಪ್ರಕರಣಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿ ಬಂದಿಲ್ಲ ಎಂದು ಹೇಳುತ್ತಾರೆ. ಪೊಲೀಸರು ನನಗೆ ನೋಟಿಸ್ ಕೊಡುವವರೆಗೂ ನಮ್ಮ ಖಾತೆಗಳಲ್ಲಿ ಇದ್ದ ಹಣ ಏನಾಗಿದೆ ಎಂದು ನಮಗೆ ಗೊತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆ ನನ್ನ ಹೆಸರಿನಲ್ಲಿ ಮಾಡಿದ ಎಫ್.ಡಿ. ಹಣ ಈಗಲೂ ನನ್ನ ಖಾತೆಯಲ್ಲಿ ಇದೆ ಎಂದರೆ ಸರಿ. ನನ್ನ ತಂದೆ ಇಟ್ಟಿದ್ದ ಹಣ ಮತ್ತು ಈಗ ಇರುವ ಹಣದಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿಲ್ಲ. ನನ್ನ ಸಹಿಯನ್ನು ಪರಿಶೀಲಿಸುವ ಸಲುವಾಗಿ ಖಾಲಿ ಹಾಳೆಗೆ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಪೊಲೀಸರು ಹೇಳುವವರೆಗೆ ನನ್ನ ಖಾತೆಯಲ್ಲಿದ್ದ ಹಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಈ ಹಿಂದೆ ನಾನು ನೋಡಿಲ್ಲ ಎಂದರೆ ಸರಿ. ಇದೇ ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ಖಾತೆಯಲ್ಲಿ ಇದ್ದ ನನ್ನ ಹಣದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ ನಂತರವೇ ನನ್ನ ಖಾತೆಯಲ್ಲಿದ್ದ ಹಣ ಕೋಕೋನಟ್ ಗ್ರೋ ರವರ ಖಾತೆಗೆ ವರ್ಗಾವಣೆಯಾಗಿರುವುದು ತಿಳಿಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**